ಮುಖಕ್ಕೆ ಸೊಳ್ಳೆ ಕಚ್ಚಿ ಕೆಂಪಗೆ ಊದಿಕೊಂಡಿತ್ತು. ಕಣದ ಅಂಚಿನ ಹಕ್ಕೆಮನೆಯಲ್ಲಿ ಸೂರಣ್ಣ ಕುಳಿತಿದ್ದ. ಕೈಯಲ್ಲೊಂದು ಮೊಬೈಲ್ ಇತ್ತು. ಉದ್ದ ಅಂಗಿ, ಸಣ್ಣ ಡ್ರಾಯರ್ ಚಡ್ಡಿ ತೊಟ್ಟು ತಲೆಗೊಂದು ಟೊಪ್ಪಿ ಸಿಕ್ಕಿಸಿಕೊಂಡು ಬೆರಚಪ್ಪನಂತೆ ಕಾಣುತ್ತಿದ್ದ. ಅವನ ಹಣೆ ಮೇಲಿನ ಗಂಧದ ಬೊಟ್ಟು ಊರ್ಮಿಯನ್ನು ದಿಟ್ಟಿಸುತ್ತಿತ್ತು. ಅಪರೂಪಕ್ಕೆ ಊರಿಗೆ ಬಂದ ಪುಟ್ಟನನ್ನು ಕಂಡು ದೇಶಾವರಿ ನಗು ನಕ್ಕ ಸೂರಣ್ಣ ನಿನ್ನೆ ಬಂದೆಯಾ ಎಂದು ಕೇಳಿದ. ಇಲ್ಲ ಇವತ್ತು ಬೆಳಗ್ಗೆ ಎಂದ ಪುಟ್ಟ. ಸೂರಣ್ಣ ಮತ್ತು ಪುಟ್ಟರ ಆಡುನುಡಿ ಊರ್ಮಿಗೆ ಅಪರೂಪವೂ ಅಸಾಮಾನ್ಯವೂ ಆಗಿತ್ತು. ಭಾಷೆಯ ಲಯ ಮತ್ತು ದನಿ ಆಕೆಯನ್ನು ಸೆಳೆಯಿತು. ಮಹಾನಗರದ ಕನ್ನಡವನ್ನು ಕೇಳಿಸಿಕೊಂಡಿದ್ದ ಊರ್ಮಿಗೆ ಅಲ್ಲಿ ಕಿವಿಗೆ ಬಿದ್ದ ಅಪರಿಚಿತ ಕನ್ನಡದ ಸದ್ದು, ಏರಿಳಿತ, ಉಚ್ಚಾರವೆಲ್ಲಾ ಆಕರ್ಷಕವೆನಿಸಿತು. ಭಾಷೆಯ ವಿಭಿನ್ನತೆಯ ಬಗ್ಗೆ ಅವಳ ಮನಸ್ಸು ಹೊರಳಿತು. ಅಷ್ಟರಲ್ಲಿ ಊರ್ಮಿಯನ್ನು ಉದ್ದೇಶಿಸಿ ಸೂರಣ್ಣ ನೀ ಎಲ್ಲಿಯವಳು ಎಂದು ಕೇಳಿದ. ಆ ಕ್ಷಣಕ್ಕೆ ಊರ್ಮಿಗೆ ಅವನ ಪ್ರಶ್ನೆ ತಿಳಿಯಲಿಲ್ಲ. ಮತ್ತೆರಡು ಬಾರಿ ಅದನ್ನೇ ಸೂರಣ್ಣ ಕೇಳುತ್ತಾ ನಡುವೆ ಊರು ಎಂದು ಸೇರಿಸಿದ. ಏನನ್ನೋ ಹೇಳಹೊರಟ ಪುಟ್ಟನ ಮಾತನ್ನು ಅತಿಕ್ರಮಿಸಿ ಊರ್ಮಿ ಕಲ್ಕತ್ತಾ ಎಂದಳು. ಊರ್ಮಿ ಸೂರಣ್ಣನ ಮಾತನ್ನು ಅರ್ಥಮಾಡಿಕೊಂಡಿದ್ದು ಪುಟ್ಟನಿಗೆ ಸೋಜಿಗವೆನಿಸಿತು. ಸೂಕ್ಷ್ಮಜ್ಞೆ ಊರ್ಮಿಗೆ ಭಾಷೆಗಿಂತಾ ಅದರ ದಾಟಿ ಅರ್ಥವಾಗಿತ್ತು.

ಸೂರಣ್ಣ ಮಾತು ಮುಂದುವರೆಸಿ ಜಾತಿ ಯಾವುದು ಎಂದು ಕೇಳಿದ. ಊರ್ಮಿಗೆ ಜಾತಿ ಎನ್ನುವ ಶಬ್ದ ಮನಸ್ಸಿಗೆ ನಾಟಿತು. ಮೌನವಾದಳು. ಸೂರಣ್ಣ ಮತ್ತದೇ ಪ್ರಶ್ನೆ ಕೇಳಿದ. ಆಗಲೇ ಗುಡ್ಡಹತ್ತಿ ಪರಿತಪಿಸಿದ್ದ ಊರ್ಮಿ ಜಾತಿ ಎಂಬ ಪದವನ್ನು ಪದೇ ಪದೇ ಕೇಳಿ ಕಸಿವಿಸಿಗೊಂಡಳು. ಇದುವರೆಗೂ ಯಾರು ಕೇಳಿರದ ಜಾತಿಯ ಪ್ರಶ್ನೆಗೆ ಊರ್ಮಿ ಕಂಪಿಸಿದಳು. ಅವಳ ಮುಖದ ಬದಲಾವಣೆಯನ್ನು ಲಕ್ಷಿಸಿದ ಪುಟ್ಟನಿಗೆ ಕೆಲಸ ಕೆಟ್ಟಿತ್ತು ಎಂದು ತಿಳಿಯಿತು. ಥತ್ ಎಂದು ಸೂರಣ್ಣನ ಕಡೆ ತಿರುಗಿ ಏರುಧ್ವನಿಯಲ್ಲೇ ನಿಮ್ಮ ಪೈಕಿಯಲ್ಲ ಅಂದ. ಸೂರಣ್ಣನಿಗೆ ಪುಟ್ಟನ ಸಿಟ್ಟು ಮತ್ತು ವ್ಯಂಗ್ಯ ಅರ್ಥವಾಗದೇ ಇರಲಿಲ್ಲ. ಆದರೂ ಸುಮ್ಮನಾಗದ ಸೂರಣ್ಣ ನೀನೇನು ನಮ್ಮವನಲ್ಲದೇ ಇತರೆಯವನಾ ಎಂದು ಗೊಣಗಿದ. ಪುಟ್ಟ ಸುಮ್ಮನಿದ್ದ. ಊರ್ಮಿ ಸಿಡಿದು ಒಂದೇ ಪದದಲ್ಲಿ ಸೂರಣ್ಣನಿಗೆ ಉತ್ತರಿಸಿದಳು. ಊರ್ಮಿ ಇಂಗ್ಲಿಷ್‌ನಲ್ಲಿ ಹೇಳಿದ್ದರಿಂದ ಸೂರಣ್ಣನಿಗೆ ಅದು ತಿಳಿಯಲಿಲ್ಲ. ಹ್ವಾ ಎಂದು ಪ್ರಶ್ನಾರ್ಥಕವಾಗಿ ಹಿಂದೂನಾ, ವೆಜ್ಜಾ ಅಥವಾ ಎಂದು ಬಾಯಿ ಸೆಳೆದ. ಊರ್ಮಿಯ ಸಿಟ್ಟನ್ನು ಅರಿತಿದ್ದ ಪುಟ್ಟ ಇನ್ನೂ ಅಲ್ಲೇ ಮುಂದುವರೆದರೆ ಆಕೆ ಸೂರಣ್ಣನ ಗ್ರಹಚಾರ ಬಿಡಿಸಿಯಾಳು ಎಂದೆಣಿಸಿ ಸೂರಣ್ಣನ ಕಡೆ ಒಂದು ಗಂಭೀರ ನೋಟ ಬೀರಿ, ಮಾರಾಯಾ ನಿನಗೊಂದು ಜಾತಿಯ ಪಿತ್ತವೇರಿದೆ, ಮದಾಲ್ಮುಂಚೆ ಮುಖ ನೋಡ್ತಾನೇ ಏನೇನೋ ಕೇಳ್ತೀಯಲ್ಲೋ ಎಂದ. ಹಾಗೆ ಹೇಳಿದವನೇ ಮರುಕ್ಷಣ ಊರ್ಮಿ ಕಡೆ ತಿರುಗಿ ಕಣ್ಣಲ್ಲೇ ಸನ್ನೆ ಮಾಡಿ ಹೊರಡೋಣವೆಂದ. ಸೂರಣ್ಣನಿಗೆ ಬಿಸಿ ಮುಟ್ಟಿಸಿಯೇ ಹೊರಡಬೇಕೆಂದಿದ್ದ ಊರ್ಮಿಗೆ ಪುಟ್ಟನ ಕಣ್ಣ ಸನ್ನೆ ರೇಗಿಸಿತು. ಸೂರಣ್ಣನ ವರ್ತನೆಗೆ ಕುಪಿತಳಾಗಿ ಊರ್ಮಿ ಇಂಗ್ಲೀಷಿನಲ್ಲಿ ಕಟುವಾಗಿ ಉತ್ತರಿಸಿದಳು. ಸೂರಣ್ಣನ ಮೇಲೆ ತಿರಸ್ಕಾರಕ್ಕಿಂತ ಮಿಗಿಲಾಗಿ ಆತನ ಯೋಚನೆಯನ್ನು ಸೃಷ್ಟಿಸಿದ ಸಮಾಜ ಮತ್ತು ಆತನ ವ್ಯಕ್ತಿತ್ವವನ್ನು ನಿರೂಪಿಸುತ್ತಿರುವ ಇವತ್ತಿನ ರಾಜಕೀಯದ ಮೇಲಿನ ಸಿಟ್ಟು ಊರ್ಮಿಯ ಮನಸ್ಸಿನಾಳದಲ್ಲಿ ಕಾವನ್ನುಂಟುಮಾಡಿತ್ತು. ಆಕೆಯ ಕಣ್ಣಲ್ಲಿದ್ದ ತೀಕ್ಷ್ಣತೆ ಪುಟ್ಟನಿಗೆ ಹೆದರಿಕೆ ತರಿಸಿತು. ಸೂರಣ್ಣನಿಗೆ ಊರ್ಮಿ ಬೈದಳೆಂದು ಗೊತ್ತಾದರೂ ಏನೆಂದು ತಿಳಿಯಲಿಲ್ಲ. ಎಲೆಯಡಿಕೆ ಕವಳದ ಕೆಂಪು ಬಾಯಿಯೊಳಗೆ ಅರ್ಧ ಮುರಿದು ಕಪ್ಪಾದ ಹಲ್ಲನ್ನು ತೋರಿಸುತ್ತಾ ಸೂರಣ್ಣ ಹ್ಹಿ ಹ್ಹಿ ಎಂದು ನಕ್ಕ.

ಊರ್ಮಿ ಮತ್ತು ಪುಟ್ಟ ಕಣದಿಂದ ಕೆಳಗಿಳಿದು ನಡೆಯಲಾರಂಭಿಸಿದರು. ಒಬ್ಬಳು ಮೊಳಕಾಲಿನ ಮೇಲೆ ಚಡ್ಡಿ ಹಾಕಿಕೊಂಡ ಹುಡುಗಿ ಕಣಕ್ಕೆ ಬಂದಿದ್ದಳೆಂದು, ಕೆಂಪಗೆ ಚೆನ್ನಾಗಿದ್ದಾಳೆಂದೂ ಮತ್ತು ಹಿಂದೂ ಆಗಿದ್ದರೂ ವೆಜ್ ಆಗಿರುವುದು ಡೌಟು, ಬಹಳ ಜೋರಿನ ಹುಡುಗಿ, ಕಮ್ಯುನಿಸ್ಟು ಇದ್ದರೂ ಇರಬಹುದೆಂದೂ ಒಂದೇ ಉಸಿರಲ್ಲಿ ಸೂರಣ್ಣ ಫೋನಲ್ಲಿ ಮಾತನಾಡುತ್ತಿದ್ದುದು ಊರ್ಮಿ ಮತ್ತು ಪುಟ್ಟ ಇಬ್ಬರಿಗೂ ಕೇಳಿಸಿತು.

ಊರ್ಮಿಗೆ ಕಣ್ಣಾರೆ ಕಂಡದ್ದನ್ನು ಒಪ್ಪಿಕೊಳ್ಳುವುದು